ಆಧುನಿಕ ದಿನಗಳ ಪ್ರತಾಪರುದ್ರದೇವ, ಇಂಗ್ಲಿಷ್ ಗೀತಗಳು, ರಕ್ತಾಕ್ಷಿ ಮೊದಲಾದ ಕೃತಿಗಳು ಕನ್ನಡ ಓದುಗರ ಗಮನ ಸೆಳೆದಿವೆ. ಅನ್ಯಭಾಷೆಯ ಕೃತಿಯನ್ನು ಅನ್ಯಸಂಸ್ಕೃತಿಯ ಭಾಗವಾಗಿ ಪರಿಗ್ರಹಿಸುವುದಕ್ಕಿಂತಲೂ ನಮ್ಮ ಸಂಸ್ಕೃತಿಯ ಭಾಗವಾಗಿಯೇ ನೋಡುವ ದೃಷ್ಟಿಕೋನವೊಂದು ಕನ್ನಡ ಸಹೃದಯ ಲೋಕದಲ್ಲಿ ಸ್ಥಾಯಿಯಾಗಿ ಇದೆ. ಹಾಗಾಗಿ ಯಥಾವತ್ತಾದ ಅನುವಾದಗಳು ಅನ್ಯದೇಶೀಯವಾಗಿ ಉಳಿಯುವ ತೊಡಕಿನ ಅನುವಾದಗಳಾಗಿವೆ. ನಮ್ಮದನ್ನಾಗಿ ಮಾಡಿಕೊಳ್ಳುವ ಅನುಸೃಷ್ಟಿಗಳು ಮೊದಲನೆಯ ದರ್ಜೆಯ ಬರವಣಿಗೆಗಳು ಆಗಿರುವ ಕಾರಣಕ್ಕಾಗಿ ಅನುವಾದಗಳು ಎರಡನೆಯ ದರ್ಜೆಯವಾಗಿಯೇ ಉಳಿದುಬಿಡುತ್ತವೆ. ಅನ್ಯಸಂಸ್ಕೃತಿ ಕೃತಿಗಳ ಓದಿನ ಸಿದ್ಧತೆಗೆ ಓದುಗರು ತೆರೆದುಕೊಳ್ಳಬೇಕಾಗಿದೆ.

> **ಪಂಪನ 'ವಿಕ್ರಮಾರ್ಜುನವಿಜಯ' ಓದುವುದು ಮೂಲ ವ್ಯಾಸನ ಕೃತಿಯನ್ನು ತಿಳಿದುಕೊಳ್ಳುವುದಕ್ಕಲ್ಲ. ಪಂಪನ ಅನುಸೃಷ್ಟಿಯ ಸೊಗಸನ್ನು, ಸೃಜನಶೀಲತೆಯನ್ನು ಕೊಂಡಾಡುವುದು ನಮ್ಮ ದೃಷ್ಟಿ.**

5 ಮಲಯಾಳಂ ಭಾಷೆಯಲ್ಲಿ ವಿಶ್ವಸಾಹಿತ್ಯದ ಅನೇಕ ಕೃತಿಗಳು ಅನುವಾದವಾಗಿವೆ. ಸಂಸ್ಕೃತದಿಂದಲೂ ಸಾಕಷ್ಟು ಅನುವಾದಗಳು ಪ್ರಕಟವಾಗಿವೆ. 20ನೇ ಶತಮಾನದ ಆರಂಭದ ದಿನಗಳಲ್ಲಿಯೇ ಅನೇಕ ಅನುವಾದ ಕೃತಿಗಳು ಪ್ರಕಟವಾಗಿವೆ. ಮರು ಮುದ್ರಣಗಳೂ ಆಗುತ್ತಿವೆ. ವಿಶ್ವಸಾಹಿತ್ಯದಲ್ಲಿ ಪ್ರಮುಖವೆಂದು ದಾಖಲಾಗುವ ಕೃತಿಗಳು ಮಲಯಾಳಂನಲ್ಲಿ ವಿಳಂಬವಾಗದೇ ಪ್ರಕಟವಾಗುತ್ತಿವೆ. ಅನ್ಯ ಭಾಷೆ ಸಂಸ್ಕೃತಿ, ಚಿಂತನೆಗಳನ್ನು ಅರಿತುಕೊಳ್ಳುವ ಸಲುವಾಗಿ ಅನುವಾದಗಳನ್ನು ಓದುತ್ತಾರೆ. ವ್ಯಾಸ, ವಾಲ್ಮೀಕಿಯರ ಯಥಾವತ್ತಾದ ಅನುವಾದಗಳು ಬೇಕು. ಬೋದಿಲೇರ, ನೆರೂಡರ ಅನುವಾದಗಳು ಬೇಕು. ಆ ಮೂಲಕ ಮಲಯಾಳಂ ಬರಹಗಾರರು, ಓದುಗರು, ವಿಶ್ವಸಾಹಿತ್ಯದ ಜೊತೆಗೆ ಗುರುತಿಸುವ ಪ್ರಯತ್ನ ಮಾಡುತ್ತಾರೆ. ಮಲಯಾಳಂ ಸಾಹಿತ್ಯ ಅನುವಾದ ಪರಂಪರೆಯಿಂದ ಸ್ಫೂರ್ತಿ ಪಡೆದಿದೆ. ಅಲ್ಲಿ ಅನುಸೃಷ್ಟಿ ಪರಂಪರೆ ಇಲ್ಲವೆಂದು ನನ್ನ ತಿಳಿವಳಿಕೆ.

ಕನ್ನಡ ಕೃತಿಗಳ ಅನುವಾದಗಳಿಗೆ ಮಲಯಾಳಂನಲ್ಲಿ ಅಂತಹ ಬೇಡಿಕೆಗಳೇನೂ ಇಲ್ಲ. ಮಲಯಾಳಂ ಪ್ರಕಾಶಕರು, ಓದುಗರು, ಭಾರತೀಯ ಭಾಷೆಗಳಲ್ಲಿ ಬಂಗಾಳಿಯಿಂದ ಮಾತ್ರ ಹೆಚ್ಚಾಗಿ ಅನುವಾದಗಳನ್ನು ಸ್ವಾಗತಿಸುತ್ತಾರೆ. ಇತರ ಭಾರತೀಯ ಭಾಷೆಗಳ ಅನುವಾದಗಳಿಗೆ ಹೇಳಿಕೊಳ್ಳುವಂತಹ ಪ್ರೋತ್ಸಾಹವೇನೂ ಇಲ್ಲ. ಸಾಹಿತ್ಯ ಅಕಾಡೆಮಿ, ಎನ್.ಬಿ.ಟಿ., ಮೊದಲಾದ ಸಂಸ್ಥೆಗಳು ಹಾಗೂ ಖಾಸಗಿ ಪ್ರಕಾಶಕರ ಕೆಲವೊಂದು ಪ್ರಕಟಣೆಗಳು ಇವೆ. ಇಂಗ್ಲಿಷಿನಲ್ಲಿ ದೊರೆಯುವ ಮಹತ್ವದ ಬಹುತೇಕ ಕೃತಿಗಳೆಲ್ಲವನ್ನು ಮಲಯಾಳಂನಲ್ಲಿಯೇ ಓದಬಹುದು.

ಕನ್ನಡ ಎಂದಾಗ ಶ್ರೀಕೃಷ್ಣ ಆಲನಹಳ್ಳಿಯವರ ಕೃತಿಗಳೇ ಗಮನಾರ್ಹ. ಅವುಗಳಿಗೆ ಹೆಚ್ಚಿನ ಓದುಗರಿದ್ದಾರೆ. 'ಚಿರಸ್ಮರಣೆ', 'ಚೋಮನದುಡಿ'ಗಳಿಗೂ ಓದುಗರು ಇದ್ದಾರೆ. ಇವನ್ನು ಬಿಟ್ಟರೆ ಕನ್ನಡದ ಬೇರೆ ಕೃತಿಗಳು ಅಷ್ಟಾಗಿ ಮಲಯಾಳಂ ಓದುಗರ ಗಮನ ಸೆಳೆಯಲಿಲ್ಲ.

6 ಅನುವಾದದಲ್ಲಿಯೂ ಸಾಂಸ್ಕೃತಿಕ ರಾಜಕಾರಣ ಇದೆ. ಈ ಬಗೆಗೆ ನನ್ನದೇ ಒಂದು ಬರವಣಿಗೆಯಿದೆ. ಅನುವಾದಕ್ಕೆ ಕೃತಿಗಳನ್ನು ಆಯ್ಕೆ ಮಾಡಿಕೊಳ್ಳುವ ಅನುವಾದಕರು, ಮೂಲ